ದಿನಾಂಕ 07.01.2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ನಂ. 1 ರಿಂದ 4 ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ

9. ಒಟ್ಟು ಕುಟುಂಬದಿಂದ ದಾವೆ ಸಲ್ಲಿಸಲ್ಲು ನನಗೆ ಯಾವುದೇ ಅಧಿಕಾರ ಪತ್ರ ಇಲ್ಲ. ಅವಿಭಕ್ತ ಕುಟುಂಬದ ಸದಸ್ಯ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅಜ್ಜನ ಕಾಲದಿಂದ ಅವಿಭಕ್ತ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇವೆ ಎಂದು ಹೇಳಲಾಗುವುದಿಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಇವೆ. ಯಾವ ವರ್ಷದಿಂದ ನಮ್ಮ ತಂದೆಯ ಹೆಸರಿಗೆ ದಾವಾ ಆಸ್ತಿಗಳು ಇವೆ ಎಂದು ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಹೆಸರಿಗೆ ಹೇಗೆ ಬಂದವು ಎಂದು ಹೇಳಲು ಆಗುವುದಿಲ್ಲ. 2006 ರಲ್ಲಿ ಪ್ರತಿವಾದಿಯರು ನಮ್ಮ ತಂದೆ ಮತ್ತು ಚಿಕ್ಕಪ್ಪ ಇವರ ವಿರುದ್ದ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಸರಿ. ಆ ದಾವೆ ನಮ್ಮ ತಂದೆಯ ವಿರುದ್ದ ಆಗಿದೆ ಎಂದರೆ ಸರಿ. ಆ ದಾವೆಯಲ್ಲಿಯ ಡಿಕ್ರಿಯನ್ನು ಪ್ರಶ್ನಿಸಿ ಸಲ್ಲಿಸಿದ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ನಂತರ ಆ ಮೇಲ್ಮನವಿಯಲ್ಲಿಯ ಆದೇಶವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

10. ನಮ್ಮ ತಂದೆ ಭಾರತೀಯ ವಾಯುಸೇನೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ ಎಂದರೆ ಸರಿ. ಸದರಿ ಕರ್ತವ್ಯದ ಅವಧಿ ಬಗ್ಗೆ ನನಗೆ ಈಗ ಹೇಳಲಾಗುವುದಿಲ್ಲ. ನನ್ನ ಚಿಕ್ಕಪ್ಪಂದಿರು ಬೇರೆ ಕಡೆಗೆ ವಾಸವಾಗಿದ್ದಾರೆ ಎಂದರೆ ಸರಿ. ನಮ್ಮ ಚಿಕ್ಕಪ್ಪ ಭೀಮಭಟ್ಟ ಇವರು ದೆಹಲಿಯಲ್ಲಿ ಇರುತ್ತಾರೆ. ಇನ್ನೊಬ್ಬ ಚಿಕ್ಕಪ್ಪ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ನಾನು ಮತ್ತು ನನ್ನ ತಾಯಿ ಮತ್ತು ತಂದೆ ಬೆಂಗಳೂರಿನಲ್ಲಿ ವಾಸಿಗಳಾಗಿದ್ದೇವೆ ಎಂದರೆ ಸರಿ. ನಾನು ಹಾಗೂ ನನ್ನ ತಂದೆ ತಾಯಿ ಬೆಂಗಳೂರಿನಲ್ಲಿ 2000 ನೇ ಇಸವಿಯಿಂದ ವಾಸವಾಗಿರುತ್ತೇವೆ. ನಂತರ ನಾವು ನಮ್ಮ ಖುದ್ದು ಊರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಇಬ್ಬರು ಚಿಕ್ಕಪ್ಪಂದಿರು 25 ವರ್ಷಗಳಿಂದ ಮೇಲೆ ಹೇಳಿದ ಸ್ಥಳಗಳಲ್ಲಿ ಇರುತ್ತಾರೆ. ನಮ್ಮ ಸ್ವಂತ ಊರು ಆನವಟ್ಟಿ ಇರುತ್ತದೆ. ಅಲ್ಲಿಯ ಆಸ್ತಿಗಳನ್ನು

ಮಾರಾಟ ಮಾಡಲಾಗಿದೆ. ಈಗ ಅಲ್ಲಿ ನಮ್ಮ ಕುಟುಂಬಕ್ಕೆ ಯಾವುದೇ ಆಸ್ತಿಗಳು ಇಲ್ಲ. ಎಲ್ಲಾ ಆಸ್ತಿಗಳನ್ನು 20 ವರ್ಷಗಳ ಹಿಂದೆ ಮಾರಾಟ ಮಾಡಲಾಗಿದೆ. ಆನವಟ್ಟಿಯಲ್ಲಿ ಮನೆ ಮಾತ್ರ ಇದೆ. ಮನೆ ನಂಬರ್ ಈಗ ಹೇಳಲಾಗುವುದಿಲ್ಲ.

11. ಈ ದಾವೆಯಲ್ಲಿ ಪ್ರತಿವಾದಿಯರು ಹಾಕಿದ ಪ್ರತಿವಾದಿ ಪತ್ರವನ್ನು ನಾನು ಓದಿಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಯರ ಎರಡು ಮನೆಗಳು ಇವೆ. ಈ ಮನೆಗಳನ್ನು ಅಂದಾಜು 3-4 ವರ್ಷಗಳ ಹಿಂದೆ ಕಟ್ಟಲಾಗಿದೆ. ಆ ಎರಡು ಮನೆಗಳ ಚಕ್ ಬಂದಿಗಳನ್ನು ಹೇಳಲು ಆಗುವುದಿಲ್ಲ. ಅಂದಾಜು 100 ವರ್ಷಗಳಿಂದ ಪ್ರತಿವಾದಿಯರು ದಾವಾ ಆಸ್ತಿಗಳ ತೆರಿಗೆ ಕಟ್ಟುತ್ತಾರೆ ಎಂದರೆ ಸರಿಯಲ್ಲ. ಪ್ರತಿವರ್ಷ ನಾವೇ ತೆರಿಗೆ ಕಟ್ಟುತ್ತೇವೆ. ಈ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದಿಯರ 2006 ರಲ್ಲಿ ಸಲ್ಲಿಸಿದ್ದ ದಾವೆಯು ಅವರ ಪರ ಆದ ನಂತರ ದಾವಾ ಆಸ್ತಿಗಳ ದಾಖಲೆಗೆ ಪ್ರತಿವಾದಿಯರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎರಡು ದಾವಾ ಆಸ್ತಿಗಳನ್ನು ನಮ್ಮ ಮುತ್ತಜ್ಜ ಗುರನಾಥ ಭಟ್ಟ ಇವರು ಪ್ರತಿವಾದಿಯರ ಅಜ್ಜ ಕೊಟ್ರ ಬಸಪ್ಪ ಇವರಿಗೆ ಮೂಲಗೇಣಿನಾತೆಯಿಂದ ಕೊಟ್ಟಿದ್ದರು ಎಂದರೆ ಸರಿ. ತದನಂತರ ಗುರುನಾಥ ಭಟ್ಟ ಮತ್ತು ಕೊಟ್ರ ಬಸಪ್ಪ ಇವರ ಮಧ್ಯ ಆದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. 1950 ರಲ್ಲಿ ಗುರುನಾಥ ಭಟ್ಟ ಇವರು ದಾವಾ ಆಸ್ತಿಗಳನ್ನು ಸಂಪೂರ್ಣವಾಗಿ ಕೊಟ್ರ ಬಸ್ಪಪ ಇವರಿಗೆ ವಹಿಸಿಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. 1950 ರ ನಂತರ ಕೊಟ್ರ ಬಸಪ್ಪನ ಮಗ ಪುಟ್ಟಪ್ಪ ಅಂದರೆ ಪ್ರತಿವಾದಿಯ ತಂದೆ ದಾವಾ ಆಸ್ತಿಗಳ ಸ್ವಾಧೀನತೆಗೆ ಬಂದರು ಎಂದರೆ ಸರಿ. ನಂತರ ದಾವಾ ಆಸ್ತಿಗಳ ಸ್ವಾಧೀನತೆ ಪ್ರತಿವಾದಿಯರ ಕುಟುಂಬದಲ್ಲಿದೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಈಗ ದಾವಾಆಸ್ತಿಗಳು ಪ್ರತಿವಾದಿಯರು ಸ್ವಾಧೀನತೆಯಲ್ಲಿವೆ ಎಂದರೆ ಸರಿ.

12. ದಾವಾ ಆಸ್ತಿಗಳಲ್ಲಿ 50 ರಿಂದ 60 ವರ್ಷ ವಯಸ್ಸಿನ ಸಾಗುವನಿ ಮರಗಳು ಇವೆ ಎಂದರೆ ಸರಿ. ಈ ಮರಗಳನ್ನು ಪ್ರತಿವಾದಿಯರ ಕುಟುಂಬದವರು ಬೆಳೆಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ

ಮರಗಳನ್ನು ತೆಗೆಯಲು ಅನುಮತಿ ಕೇಳಿ ಪ್ರತಿವಾದಿಯರು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಪ್ರತಿವಾದಿಯರು ಅರಣ್ಯ ಇಲಾಖೆಯ ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದ ವಿಚಾರ ನನಗೆ ಸಾಗರದ ಟಿಂಬರ್ ಮರ್ಚಂಟ್ ಗಣಪತಿ ಎನ್ನುವವರಿಂದ ತಿಳಿಯಿತು ಎಂದರೆ ಸರಿ. ಅವರು ಈ ಮರಗಳನ್ನು ಖರೀದಿ ಮಾಡಲು ಹೋಗಿದ್ದರು ಎಂದರೆ ಸರಿ. ಪ್ರತಿವಾದಿಯರು ಈ ಮರಗಳನ್ನು ಸದರಿ ಗಣಪತಿ ಇವರಿಗೆ ಕೊಡಲು ನಿರಾಕರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಆ ಗಣಪತಿ ನಮಗೆ ಈ ವಿಚಾರ ತಿಳಿಸಿದ್ದರು ಎಂದರೆ ಗೊತ್ತಿಲ್ಲ. ತದನಂತರ ನನ್ನ ತಂದೆ ಈ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1950 ಕ್ಕಿಂತ ಮೊದಲೇ ನಾವು ದಾವಾ ಆಸ್ತಿಗಳ ಮೇಲೆ ಹಕ್ಕು ಕಳೆದುಕೊಂಡಿದ್ದು, ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ಮಧ್ಯ ಯಾವುದೇ ಮಾತುಕತೆ ಆಗಿಲ್ಲ. ನಾನು ಪ್ರತಿವಾದಿಯರನ್ನು ಭೇಟಿ ಆಗಿಲ್ಲ ಮತ್ತು ಆಸ್ತಿ ಕುರಿತು ಖುದ್ದಾಗಿ ವಿಚಾರಿಸಿಲ್ಲ ಎಂದರೆ ಸರಿ. ಗಣಪತಿ ಇವರು ಹೇಳಿದ ಮಾಹಿತಿಯನ್ನು ಆಧರಿಸಿ ಅವರ ಚಿತಾವಣೆ ಮೇರೆಗೆ ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.